ನಕ್ಕು ಬಿಡಿ




ಹೆಂಡತಿ: ರೀ, ನನ್ನನ್ನು ಮದುವೆ ಆದ ಮೇಲೆ, ನಿಮಗಿಂತ ತುಂಬಾ ಅದೃಷ್ಟಶಾಲಿಗಳು ಬೇರೆ ಯಾರಾದ್ರೂ ಇದ್ದಾರೆ ಅಂತಾ ಅನಿಸುತ್ತಾ ನಿಮಗೆ?

ಗಂಡ: ಒಬ್ಬನು ಇದ್ದಾನೆ ಕಣೇ, ನನಗಿಂತ ಮೊದಲು ನಿನ್ನನ್ನು ನೋಡಿ ನಿರಾಕರಿಸಿದನಲ್ಲಾ ಅವನು!

★★★

ಸೂರಿ: ಸಾರ್ ನೈಟ್ ವಾಚ್‌ಮೆನ್ ಕೆಲಸಕ್ಕೆ ಜನ ಬೇಕು ಅಂತಿದ್ರಲ್ಲಾ ಕರೆದುಕೊಂಡು ಬಂದಿದ್ದೇನೆ ನೋಡಿ.

ಯಜಮಾನ: ರಾತ್ರಿ ಮಲಗಿಕೊಳ್ಳದೇ ಡ್ಯೂಟಿ ಮಾಡುತ್ತಾನೆ ಅನ್ನೋದಕ್ಕೆ ಏನು ಗ್ಯಾರಂಟಿ ಇದೆ?

ಸೂರಿ: ಎಲ್ಲಾ ವಿವರಗಳನ್ನು ಚೆಕ್ ಮಾಡಿಕೊಂಡೇ ಬಂದಿದ್ದೇನೆ.

ಯಜಮಾನ: ಏನು ವಿವರ?

ಸೂರಿ: ಕಳೆದ ಮೂರು ವರ್ಷದ ವಾಟ್ಸ್ಯಾಪ್ ಮೆಸೇಜ್, ಫೇಸ್‌ಬುಕ್ ಕಮೆಂಟ್ಸ್‌ಗಳೆಲ್ಲವನ್ನೂ ಓದಿ ರಾತ್ರಿ 10 ರಿಂದ ಬೆಳಿಗ್ಗೆ 6 ಗಂಟೆಯ ಒಳಗೇ ಡಿಲೀಟ್ ಮಾಡಿದ್ದಾನೆ ಸರ್!

★★★

ಹುಡುಗಿ: ಸಾರಿ ಕಣೋ, ನನಗೆ ಬೇರೆ ಹುಡುಗನ ಜೊತೆ ಮದುವೆ ಫಿಕ್ಸ್ ಆಗಿದೆ. ನನ್ನ ಮರೆತು ಬಿಡು.

ಹುಡುಗ: ಏನೂ ಪರವಾಗಿಲ್ಲ ಕಣೇ, ನನಗಿದು ಮೊದಲೇ ಗೊತ್ತಿತ್ತು.

ಹುಡುಗಿ: ಹೇಗೆ ಗೊತ್ತಾಯ್ತು?

ಹುಡುಗ: ನನಗೆ ಒಬ್ಬ ಜ್ಯೋತಿಷಿ ಹೇಳಿದ್ದರು 'ನಿನ್ನ ಕೆಟ್ಟ ದಿನಗಳೆಲ್ಲಾ ಮುಗಿದವು, ಇನ್ನು ಒಳ್ಳೆ ಸಮಯ ಪ್ರಾರಂಭವಾಗುತ್ತೆ' ಅಂತ!

★★★

ಕಾಶಿ ಯಾತ್ರೆಯ ಪ್ರವಾಸದ ಬಸ್‌ನಲ್ಲಿ ಟೂರ್ ಮ್ಯಾನೇಜರ್ ಪ್ರವಾಸಿಗರನ್ನು ಉದ್ದೇಶಿಸಿ: 'ನಿಮಗೆಲ್ಲಾ ಇಷ್ಟವಾದ ವಿಷಯ, ವಸ್ತುಗಳನ್ನು ಒಂದು ಪೇಪರ್‌ನಲ್ಲಿ ಬರೆದು ಮುಚ್ಚಿಡಿ' ಎಂದರು.

ಎಲ್ಲರೂ ಐಸ್‌ಕ್ರೀಂ, ಟೀ, ಮಸಾಲೆ ದೋಸೆ, ಬಾಳೆಹಣ್ಣು... ಹೀಗೆ ಬರೆದರು. ಆ ಚೀಟಿಗಳನ್ನೆಲ್ಲಾ ತೆಗೆದುಕೊಂಡ ಮ್ಯಾನೇಜರ್ 'ನೀವು ಬರೆದ ನಿಮಗೆ ಇಷ್ಟವಾದ ವಸ್ತುವನ್ನು ನೀವು ಕಾಶಿಯಲ್ಲಿ ಬಿಟ್ಟು ಹೋಗಿ' ಎಂದರು.

ಇದನ್ನು ಕೇಳುತ್ತಲೇ ಸೂರಿ ಖುಷಿಯಿಂದ ಕುಣಿದಾಡಿದ, ಯಾಕೆಂದರೆ ಅವನು ಚೀಟಿಯಲ್ಲಿ ಬರೆದದ್ದು ಹೆಂಡತಿ!

■ (ಸಂಗ್ರಹ) ಕೆ.ಪಿ.ಅಶ್ವಿನ್ ರಾವ್

ಮದುವೆಯ ಹಿಂದಿನ ದಿನ ವರನಿಗೊಂದು ಭಾವೀ ಪತ್ನಿಯಿಂದ ಮೊಬೈಲ್ ಸಂದೇಶ ಬಂತು.

ಡಾರ್ಲಿಂಗ, ನಾವು ಮದುವೆಯಾಗುವುದು ಸಾಧ್ಯವಿಲ್ಲ. ನನ್ನ ನಿಶ್ಚಿತಾರ್ಥ ಬೇರೆಯವನೊಂದಿಗೆ ನಡೆಯಿತು.

ವರ ತುಂಬ ಉದ್ವೇಗಗೊಂಡ.

ಕೆಲ ನಿಮಿಷದ ಅನಂತರ ಮತ್ತೊಂದು ಸಂದೇಶ ಬಂತು.

ಅಯ್ಯೋ, ತಪ್ಪಿ ನಿಮಗೆ ಸಂದೇಶ ಕಳಿಸಿಬಿಟ್ಟೆ. ಕ್ಷಮಿಸಿ.

ವರ ಮತ್ತಷ್ಟು ಉದ್ವೇಗಗೊಂಡ.

ರೀ, ಮಗ್ಗಲ ಮನಿ ಅಕ್ಕರ ಹೇಣ್ತೀನ ಹೂವಿನ ಹಾಸಿಗ್ಯಾಗ ದಿನಾ ಮಲಗಸ್ತಾನ. ನೀವೂ ಇದೀರಿ. ಅಂದಳು ಗುಂಡಿ.

ಲೇ, ಅವನು ಹೂವಿನ ವ್ಯಾಪಾರ ಮಾಡತಾನ ಹೂವಿನ್ಯಾಗ ಮಲಗಸ್ತಾನ. ನಾನು ಮೆಣಸಿನಕಾಯಿ ವ್ಯಾಪಾರ ಮಾಡೋಂವ ನಾನೂ ಮೆಣಸಿನಕಾಯಿ ಮ್ಯಾಲ ಮಲಗಸ್ಲೇನು? ಅಂದ ಹೆಂಡತಿಗೆ.

■ (ಸಂಗ್ರಹ) ಪ್ರಕಾಶ.ಎಸ್.ಮನ್ನಂಗಿ,


